## 2

# ಉತ್ಕೃಷ್ಟವಾದ ನಿರೀಕ್ಷೆಯಲ್ಲಿ ಆನಂದಿಸಿ (1 ಪೇತ್ರ 1:3-12)

ಕಾರಣವನ್ನು ತಿಳಿದಿರುವಂತಹ ವಿವೇಕಿಯಾದ ಮನುಷ್ಯನು ನಿರೀಕ್ಷೆಯನ್ನು ಹೊಂದಿರುತ್ತಾನೆ. ಭವಿಷ್ಯವು ಉತ್ತಮವಾಗಿರುತ್ತದೆ ಎಂಬ ನಿರೀಕ್ಷೆಯು ಇರುವದರಿಂದ ನಾವುಗಳು ಹಿಂಸೆಯನ್ನು ಅನುಭವಿಸುತ್ತೇವೆ. ಈ ವಿವೇಕಿಯಾದ ಮನುಷ್ಯನ ನಿರೀಕ್ಷೆಯನ್ನೇ ಪೇತ್ರನು ತನ್ನ ಓದುಗರಿಗೆ ತಿಳಿಸುತ್ತಿದ್ದಾನೆ.

### ಯೇಸು ಜೀವಿಸುತ್ತಿರುವದರಿಂದ ನಿರೀಕ್ಷೆಯು ಜೀವಿಸುತ್ತದೆ (1:3-5)

ಹೊಸದಾಗಿ ಕ್ರಿಸ್ತನನ್ನು ಸೇರಿಕೊಂಡ ಮತ್ತು ಅದರ ನಿಮಿತ್ತ ಹಿಂಸೆಯನ್ನು ಅನುಭವಿಸುತ್ತಿದ್ದವರಿಗೆ ಆತ್ಮೀಕ ನಾಯಕನು ಏನು ಹೇಳುತ್ತಿದ್ದಾನೆ? ಅವರು ನೂತನ ವಾದ ಜೀವಿತವನ್ನು ಪ್ರಾರಂಭಿಸಿದ್ದರು, ಅವರು ಸಂತೋಷವುಳ್ಳ ಆಶೀರ್ವಾದದ ನಿರೀ ಕ್ಷೆಯನ್ನು ಹೊಂದಿದ್ದರು, ಆದರೆ ಅವರ ನೆರೆಹೊರೆಯವರು ಅವರನ್ನು ದಿಕ್ಕರಿಸಿದರು, ಅಧಿಕಾರಿಗಳು ಅವರನ್ನು ಹಿಂಸಿಸಿ, ಅವರ ಅವಶ್ಯಕತೆಗಳನ್ನು ನಿಲ್ಲಿಸಿದರು. ಪೇತ್ರನು ನಿರೀಕ್ಷೆ ಎಂಬುದಾಗಿ ಮನವಿಮಾಡಿದನು. ಈ ಅಧ್ಯಾಯದಲ್ಲಿ ನಿರೀಕ್ಷೆ ಎಂಬ ಪದವನ್ನು ಮೂರುಸಾರಿ ಉಪಯೋಗಿ ಸಿದನು (ವಚನಗಳು 3, 13, 21) 3ನೇ ಅಧ್ಯಾಯದಲ್ಲಿ ಎರಡು ಸಾರಿ ಪದ ಪ್ರಯೋಗಮಾಡಿದ್ದಾನೆ (ವಚನಗಳು 5, 15). ಮೊದಲನೇ ಪೇತ್ರನ ಪತ್ರಿಕೆಯು "ನಿರೀಕ್ಷೆಯ ಪತ್ರಿಕೆ" ಎಂದು ಕರೆಯಲಾಗಿದೆ. ಪೇತ್ರನನ್ನು, "ನಿರೀಕ್ಷೆಯ ಅಪೊಸ್ತಲನು" ಎಂಬುದಾಗಿ ಕರೆ ಯಲಾಗಿದೆ. ಪೇತ್ರನೊಬ್ಬನೆ ನಿರೀಕ್ಷೆಯ ಕುರಿತಾಗಿ ಹೊಸ ಒಡಂಬಡಿಕೆಯಲ್ಲಿ ಬರೆದನು ಎಂದರೆ ತಪ್ಪಾಗುತ್ತದೆ. ಯಾಕೆಂದರೆ ಪೌಲನು ರೋಮಾಪುರ (5, 8, ಮತ್ತು 12) ಈ ಮೂರು ಅಧ್ಯಾಯಗಳಲ್ಲಿ ಈ ಪದವನ್ನು ಹದಿನೈದು ಸಾರಿ ಉಪಯೋಗಿಸಿದ್ದಾನೆ. ಮೊದಲ ಪೇತ್ರನ ಪತ್ರಿಕೆಯನ್ನು "ನಿರೀಕ್ಷೆಯ ಪತ್ರಿಕೆ" ಎಂದು ಕರೆಯುವುದು ಅಬದ್ಧವಾಗಬಹುದು. ಆದರೆ ಇದರಲ್ಲಿ ನಿರೀಕ್ಷೆಯ ಸಂದೇಶವನ್ನು ನೀಡಲಾಗಿದೆ ಇದರಲ್ಲಿ ಸಂದೇಹವೇ ಇರುವದಿಲ್ಲ. ಕ್ರೈಸ್ತರ ನಿರೀಕ್ಷೆಯು, ಅಂತ್ಯದ ಸಮಯಕ್ಕೆ ಹೆಣೆಯಲ್ಪಟ್ಟದ್ದಾಗಿದೆ, ಅದು ಕರ್ತನು ಬರುವ ಸಮಯವಾಗಿದೆ, ಮತ್ತು ಅದು ಎಲ್ಲವುಗಳ ಅಂತ್ಯದ ಸಮಯವೂ ಆಗಿದೆ (1:5, 7, 9, 13).

ಯೇಸು ಕ್ರಿಸ್ತನು ಮರಣದಿಂದ ಎದ್ದು ಬಂದಿದ್ದನು ಎಂದು ಪೇತ್ರನ ಓದುಗರಿಗೆ ತಿಳಿದಿತ್ತು, ಅವರು ಜೀವವುಳ್ಳ ನಿರೀಕ್ಷೆಗೆ ಹೊಸದಾಗಿ ಹುಟ್ಟಿದ್ದರು, ಯಾಕೆಂದರೆ ಕ್ರಿಸ್ತನು - ಜೀವಿತನಾಗಿ ರಾಜ್ಯಬಾರ ಮಾಡುತ್ತಿದ್ದನು (1:3, 21).

ಈ ಜೀವವುಳ್ಳ ನಿರೀಕ್ಷೆಯಲ್ಲಿ ಯಾರು ಪಾಲು ತೆಗೆದುಕೊಳ್ಳಬಹುದು? ಯಾರ್‍ಯಾರು ಹೊಸದಾಗಿ ಹುಟ್ಟಿರುವವರೋ, ಅಂಥವರು ಇದರಲ್ಲಿ ಪಾಲುಗಾರರಾಗಬಹುದು ಎಂದು ಪೇತ್ರನು ತಿಳಿಸಿದ್ದಾನೆ (1:3). KJV ಹೇಳುತ್ತದೆ ದೇವರು ನಮ್ಮನ್ನು "ಪುನಃ ಹುಟ್ಟಿಸಿದ್ದಾನೆ" NIV ಆತನು ನಮಗೆ "ಹೊಸಜನನವನ್ನು" ನೀಡಿದ್ದಾನೆ. ಮೂವತ್ತೈದು ವರ್ಷಗಳ ಹಿಂದೆ ಯೇಸು ನಿಕೊದೇಮನಿಗೆ ಹೇಳಿದ ಮಾತನ್ನೆ ಪೇತ್ರನು ಹೇಳುತ್ತಿದ್ದಾನೆ. ನೀರಿನಿಂದಲೂ, ಆತ್ಮದಿಂದಲೂ ಹುಟ್ಟುವದರಿಂದ ಉತ್ಕೃಷ್ಟವಾದ ನಿರೀಕ್ಷೆಯು ದೊರಕುತ್ತದೆ (ಯೋಹಾನ

3:5). "ನೀರಿನಿಂದಲೂ ಆತ್ಮನಿಂದಲೂ" ಹುಟ್ಟವದು ಎಂಬ ವ್ಯಾಖ್ಯಾನವು ದೀಕ್ಷಾಸ್ನಾನದ ಕುರಿತು ಹೇಳುತ್ತದೆ. ಹೊಸದಾಗಿ ಹುಟ್ಟುವದು ಎಂದರೆ, ದೀಕ್ಷಾಸ್ನಾನ ಮಾಡಿಸಿಕೊಂಡವನು ಯೇಸುವಿನೊಂದಿಗೆ ಎದ್ದು ಜೀವವುಳ್ಳ ನಿರೀಕ್ಷೆಗೆ ಪಾತ್ರನಾಗುತ್ತಾನೆ. ನೀರಿನ ದೀಕ್ಷಾಸ್ನಾನದಲ್ಲಿ ಅವನು ಕ್ರಿಸ್ತನ ರಕ್ತವನ್ನು ಸಂಧಿಸುತ್ತಾನೆ, ಮತ್ತು "ದೇವರ ಬಲವುಳ್ಳ ವಾಕ್ಯದ ಮೂಲಕ ಅವನು ಹೊಸದಾಗಿ ಹುಟ್ಟುತ್ತಾನೆ" (1:23).

ಕ್ರೈಸ್ತರು ತಮ್ಮ ಕಣ್ಣುಗಳನ್ನು ದೃಷ್ಟಿಸಬೇಕಾದ ಈ ಜೀವವುಳ್ಳ ನಿರೀಕ್ಷೆಯಾವುದು? ಅದು ಪರಲೋಕದ ಸ್ವಾಸ್ತ್ಯವಾಗಿದೆ, ಅದು ಲಯ, ಕಳಂಕ, ಕ್ಷಯಗಳಿಲ್ಲದ ಬಾಧ್ಯತೆಯಾಗಿದೆ (1:4). "ಬಾಧ್ಯತೆ" ಎಂಬುದಕ್ಕೆ ಗ್ರೀಕ್ ಭಾಷೆಯಲ್ಲಿ ಒಬ್ಬನ ಪಾಲು ಅಥವಾ ಒಂದು ಭಾಗ ಎಂಬ ಅರ್ಥವಿದೆ, ಒಬ್ಬ ಕ್ರೈಸ್ತನು ಬಾಧ್ಯಸ್ತನು ಎಂದು ತಿಳಿಸಲಾಗಿದೆ. ಗಲಾತ್ಯ 4:1-7ರಲ್ಲಿ, ಇಲ್ಲಿ ಪೌಲನು ಅನೇಕ ದೇವರ ಸೇವಕರುಗಳು, ದೇವರ ಮಗನಂತೆ ಬಾಧ್ಯಸ್ಥರು ಎಂದು ತಿಳಿಸಿದ್ದಾನೆ. ಕ್ರಿಸ್ತನಲ್ಲಿ ಒಬ್ಬನು ಬಾಧ್ಯತೆಯಲ್ಲಿ ತನ್ನ ಪೂರ್ಣವಾದ ಪಾಲನ್ನು ಅನುಭವಿಸುತ್ತಾನೆ ಇದನ್ನು ದೇವರು ಮಾತ್ರ ತನ್ನ ಗಂಡು ಮತ್ತು ಹೆಣ್ಣು ಮಕ್ಕಳಿಗೆ ನೀಡುವವನಾಗಿದ್ದಾನೆ.

ಬಹುಶಃ ಈ ಪರಲೋಕದ ಒಂದು ಭಾಗದ ಕುರಿತಾದ ಯೋಚನೆಯು, ಈ ದಿನಗಳ ಕ್ರೈಸ್ತರಿಗಿಂತಲೂ, ಪೇತ್ರನ ದಿನಗಳ ಕ್ರೈಸ್ತರಿಗೆ ಹೆಚ್ಚು ಅರ್ಥವನ್ನು ಉಂಟುಮಾಡಿರಬಹುದು. ಆರೋಗ್ಯದ ನಿಮಿತ್ತ ಉಂಟಾಗುವ ಕ್ರಯಕ್ಕಿಂತಲೂ ಅಥವಾ ಒಂದು ಸೌಂಡ್‌ಸಿಸ್ಟಮ್‌ನ್ನು ಅಳವಡಿಸಿಕೊಂಡು ನೆರೆಹೊರೆಯವರಿಗೆ ಸಂತೋಷ ಪಡಿಸುವದಕ್ಕಿಂತಲೂ ಯೇಸುವಿನ ಬರೋಣದ ವಿಷಯವು ಹೆಚ್ಚು ಆಸಕ್ತಿದಾಯಕವಿರುವದಿಲ್ಲ. ಮನುಷ್ಯನ ಯಾವುದೇ ಕಾರ್ಯಗಳು, ಪರಲೋಕದ ವಾಗ್ದಾನವನ್ನು ನೆರವೇರಿಸಿಕೊಳ್ಳಲು ಸಾಧ್ಯಮಾಡುತ್ತದೋ? ಪೇತ್ರನು ಇದಕ್ಕೆ ಉತ್ತರವನ್ನು ನೀಡಿದ್ದಾನೆ: "ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗುವದಕ್ಕೆ ಸಿದ್ಧವಾಗಿರುವ ರಕ್ಷಣೆಯು" ಎಂಬುದಾಗಿ ತೋರಿಸಿದ್ದಾನೆ (1:5). "ಕೀರ್ತಿ, ಮಾನ, ಪ್ರಭಾವಗಳನ್ನು ಉಂಟುಮಾಡುವದು" (1:7), "ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ದೊರಕುವ ಭಾಗ್ಯವು" (1:13) ಹಿಂಸೆಯನ್ನು ಗುರಿಯನ್ನು ಸಂತೋಷವನ್ನು ಮತ್ತು ಜೀವಿತದ ದುಃಖವನ್ನು ಜಯಿಸಿ, ಅಂತ್ಯಕಾಲದ ಕಾರ್ಯಗಳನ್ನು ಪ್ರತಿಬಿಂಬಿಸಿ ಪ್ರಪಂಚದಲ್ಲಿ ಬೀಡುಬಿಟ್ಟಿರುವ ಹೃದಯವನ್ನು ಗುಣಪಡಿಸುತ್ತದೆ.

## ಹಿಂಸೆಯ ನಡುವೆ ಸಂತೋಷವು ಜೀವಿಸುತ್ತದೆ (1:6-9)

ನಂಬಿಕೆಗೋಸ್ಕರ ಹಿಂಸೆಯನ್ನು ಅನುಭವಿಸುತ್ತಿದ್ದಂಥ ಕ್ರೈಸ್ತರಿಗೆ ಪೇತ್ರನು ಏನು ಹೇಳು ತ್ತಿದ್ದಾನೆ? ನಿರೀಕ್ಷೆಯ ಮನವಿಯು ಸ್ವಾಭಾವಿಕವಾಗಿದ್ದರೂ, ಅಲ್ಲಿ ಸಂತೋಷವು ಇರಲಿಲ್ಲ. ಆದಾಗ್ಯೂ ತಡೆಹಿಡಿಯಲಾಗದ ಕ್ರಿಸ್ತನ ಸಂತೋಷದ ಬಗ್ಗೆ ಪೇತ್ರನು ಅವರಿಗೆ ನೆನಪು ಮಾಡಿದನು. KJV ಬೈಬಲ್ ಅತಿಶಯವಾದ ಗ್ರೀಕ್ ಪದದ ಅರ್ಥವನ್ನು ನೀಡುತ್ತದೆ. "ಹೇಳಲ ಶಕ್ಯವಾದ ಸಂತೋಷ ಮತ್ತು ಪ್ರಭಾವ" ಎಂದು ತಿಳಿಸುತ್ತದೆ (1:6). ಗ್ರೀಕ್ ವ್ಯಾಖ್ಯಾನವು ತರ್ಜುಮೆಗಿಂತಲೂ ಹೆಚ್ಚಾಗಿರುತ್ತದೆ. ಅದು ಸರ್ವೋತ್ಕ್ರಷ್ಟವಾಗಿದೆ, ಈ ಸಂತೋಷ ಅಂದರೆ ಏನು? ದೇವರ ಮಗನು ನಿಮ್ಮನ್ನು ಪ್ರೀತಿಸುತ್ತಾನೆ, ಮತ್ತು ನೀವು ಆತನನ್ನು ಪ್ರೀತಿಸಲು ಬಂದಿರುವಿರಿ, ಎಂದು ಪೇತ್ರನು ಉತ್ತರಿಸಿದ್ದಾನೆ, "ನಿಮ್ಮನ್ನು ಪಾಪದಿಂದ ಬಿಡಿಸಲು ತನ್ನ ಜೀವವನ್ನೇ ನೀಡಿದ್ದಾನೆ. ಈ ನೀವು ಅನುಭವಿಸುತ್ತಿರುವ ಹಿಂಸೆಯು ನಿಮ್ಮನ್ನು ನಿರೀಕ್ಷೆಯ ಗುರಿಯ ಕಡೆಗೆ ನಡೆಸುತ್ತದೆ. ಅದು ನಿಮ್ಮ ಆತ್ಮಗಳ ರಕ್ಷಣೆಗೆ ನಡೆಸುತ್ತದೆ. ಹಾಡು ಈಗ ನೀವು ಹೇಳಲ ಶಕ್ಯವಾದ ಸಂತೋಷದಿಂದ ಆನಂದಿಸಿರಿ."

ಕ್ರಿಸ್ತನು ನಮಗೆ ಈ ಲೋಕದಲ್ಲಿ ಉತ್ತಮವಾದ ಜೀವಿತವನ್ನು ನೀಡುವನು ಅದರಲ್ಲಿ ಸಂದೇಹವಿಲ್ಲ, ನಮ್ಮ ಮನಸ್ಸುಗಳು ನಿತ್ಯತ್ವದ ಮೇಲೆ ಇರಬೇಕೆಂದು ಇದನ್ನು ಆತನು ಮಾಡುತ್ತಾನೆ. ಅಪೊಸ್ತಲರು ಯಾವಾಗಲೂ ತಮ್ಮ ಮನಸ್ಸುಗಳನ್ನು ನಿತ್ಯತ್ವದ ಮೇಲೆ ಇಟ್ಟಿದ್ದರು

ಎಂದು 1 ಪೇತ್ರನ ಪತ್ರಿಕೆಯಲ್ಲಿ ನೋಡುತ್ತೇವೆ. "ನೀವು ಆತನನ್ನು ಕಣ್ಣಾರೆ ನೋಡದೆ ಇದ್ದರೂ" ಪೇತ್ರನು ಹೇಳುತ್ತಿರುವದು, "ನೀವು ಆತನಲ್ಲಿ ನಂಬಿಕೆ ಇಟ್ಟಿರುವಿರಿ, ವಿಶ್ವಾಸದಿಂದ ನೀವು ಆತ್ಮದ ರಕ್ಷಣೆಯನ್ನು ಹೊಂದಿರುವಿರಿ" ಅನೇಕ ವಿಷಯಗಳು ನಿತ್ಯತ್ವವನ್ನು ನಮ್ಮ ಮಂದೆ ಇಡುತ್ತದೆ. ವಿಚಾರಣೆಯ ದಿನ (2:12), ಯೇಸು ದೇವರ ಬಲಗಡೆಯಲ್ಲಿದ್ದಾನೆ (3:22), ಕಳೆದು ಹೋದ ಕಾಲವೇ ಸಾಕು (4:5), ಎಲ್ಲವುಗಳ ಅಂತ್ಯವು ಹತ್ತಿರವಾಗಿದೆ (4:7). ಆತನ ಮಹಿಮೆಯ ಪ್ರತ್ಯಕ್ಷತೆ (4:13), ಹಿರೀ ಕುರುಬನ ಪ್ರತ್ಯಕ್ಷತೆ (5:4) ನಮ್ಮ ಕಣ್ಣುಗಳನ್ನು ನಿತ್ಯತ್ವದ ಮೇಲೆ ಕೇಂದ್ರಿಕರಿಸಿರುವಾಗ ಈ ಲೋಕದಲ್ಲಿರುವ ಅಲ್ಪ ಜಯಪಜಯಗಳು ಇಲ್ಲದಂತಾಗುತ್ತದೆ. ಕ್ರಿಸ್ತನನ್ನು ಅರಿಯುವವರು ಅಂದರೆ ಪುನರ್ ಜ್ಞಾನವನ್ನು ಪಡೆದಂತೆಯೇ ಕ್ರಿಸ್ತನು ಜೀವಿತಕ್ಕೆ ನೂತನ ಉದ್ದೇಶಗಳನ್ನು ನೀಡುತ್ತಾನೆ, ಅದು ಒಣನೆಲದಲ್ಲಿ ಉದ್ಭವಿಸುವ ಸಂತೋಷವಾಗಿರುತ್ತದೆ.

## ಪ್ರವಾದಿಗಳ ಸೇವೆಯ ಮುಖಾಂತರ ಪ್ರೋತ್ಸಾಹವು ಜೀವಿಸುತ್ತದೆ (1:10-12)

ಪ್ರವಾದಿಗಳು ಬರೆದ ಹೊಸ ಹುಟ್ಟುವಿಕೆ, ನೂತನ ಜೀವಿತ, ಮತ್ತು ಯೇಸುವಿನ ಬೋಧನೆಗಳನ್ನು ಪೇತ್ರನು ತನ್ನ ಓದುಗರಿಗೆ ಪರಿಚಯಿಸುತ್ತಿದ್ದಾನೆ. ಅವರ ಸೇವೆಯು, ಸಂಯುಕ್ತವಾದ ಹೊಸ ಒಡಂಬಡಿಕೆಯ ಸಾಕ್ಷಿಯಾಗಿರುತ್ತದೆ. ಯೇಸು ಲೂಕ 24:27ರಲ್ಲಿ ಉಪಯೋಗಿಸಿರುವಂತೆ, ಹಳೆ ಒಡಂಬಡಿಕೆಯ ಸಾಕ್ಷಿಯನ್ನು ಸಹಪೇತ್ರನು ಉಪಯೋ ಗಿಸಿರಬಹುದು, ಅಲ್ಲಿ ಮತ್ತೊಬ್ಬನು ಇರುವ ಸಾಧ್ಯತೆಯೂ ಇರಬಹುದು. ಒಂದು ವೇಳೆ ಹೊಸ ಒಡಂಬಡಿಕೆಯ ಪ್ರವಾದಿಗಳನ್ನೂ ಸಹ ಸೇರಿ ಸಬಹುದು. ಒಂದು ವೇಳೆ, ಹಳೇ ಅಥವಾ ಹೊಸ ಒಡಂಬಡಿಕೆಯ ಪ್ರವಾದಿಗಳು ಪೇತ್ರನ ಆಲೋಚನೆಯಲ್ಲಿರಬಹುದು, ದೇವರು ತನ್ನ ಸೇವಕರನ್ನು ಕಳುಹಿಸಿ, ಆರಿಸಲ್ಪಟ್ಟವರನ್ನು ತನ್ನ ಭಾದ್ಯತೆಗೆ ಸಿದ್ಧಮಾಡಿದ್ದಾನೆ. ದೈವಭಕ್ತಿ ಇಲ್ಲದವರು ನೀಡುತ್ತಿದ್ದ ಕಿರುಕುಳವನ್ನು ಸಹಿಸಿಕೊಳ್ಳಲು, ಪೇತ್ರನ ಓದುಗರಿಗೆ ಪ್ರವಾದಿಗಳು ಸಹಾಯಿಸಿದ್ದರು. ಅವರು ಹೊಸದಾಗಿ ಹುಟ್ಟಿದ್ದರಿಂದ, ದೇವರ ಉದ್ದೇಶ ಪೂರಿತವಾದ ಆಶೀ ವಾರ್ದಗಳನ್ನು ಸ್ವೀಕರಿಸಿದರು - ಆ ಆಶೀರ್ವಾದವು ಪರಿಶುದ್ಧಾತ್ಮನ ಮೂಲಕ ನೀಡಲಾಗಿತ್ತು, ಅದು ಮಹಿಮೆ ಉಳ್ಳದ್ದಾಗಿ ಪರಲೋಕದಿಂದ ಕಳುಹಿಸಲ್ಪಟ್ಟದ್ದಾಗಿತ್ತು.

## ಮುಕ್ತಾಯ

ಕ್ರೈಸ್ತರ ವಿಶ್ವಾಸದ ಮೂಲಭೂತ ವಿಷಯಗಳನ್ನು ನೆನಪು ಮಾಡುವದರ ಮೂಲಕ ಪೇತ್ರನು ಬುನಾದಿಯನ್ನು ಹಾಕಿ ಅವರನ್ನು ಎಚ್ಚರಗೊಳಿಸಿದನು. ಯೇಸುವಿನ ಪುನರುತ್ಥಾನದ ಮುಖಾಂತರ ಅವರು ಜೀವವುಳ್ಳ ನಿರೀಕ್ಷೆಗೆ ಕರೆಯಲ್ಪಟ್ಟಿದ್ದರು, ಅದು ಎಲ್ಲಾ ಹಿಂಸೆಗಳನ್ನು ಸಹಿಸಿಕೊಳ್ಳುವದಕ್ಕೆ ಸಾಕಾಗಿತ್ತು ಈ ಲೋಕದ ಯಾವುದೇ ಸಂಗತಿಗಳು ಅವರಲ್ಲಿ ನಿರೀಕ್ಷೆ ಮತ್ತು ವಾಗ್ದಾನದ ಮುಖಾಂತರ ಉಂಟಾಗಿದ್ದ ಸಂತೋಷವನ್ನು ತೆಗೆದು ಹಾಕಲು ಸಾಧ್ಯವಾ ಗಲಿಲ್ಲ. ಎಲ್ಲಕ್ಕಿಂತಲೂ ಮಿಗಿಲಾಗಿ, ಎಲ್ಲಾ ಪ್ರವಾದಿಗಳು ಅವರ ಕುರಿತಾಗಿ ಸೇವೆ ಮಾಡಿದ್ದರು ಎಂದು ಪೇತ್ರನು ಅವರಿಗೆ ನೆನಪು ಮಾಡಿದ್ದನು. ಅವರು ಆತನ ನಿತ್ಯತ್ವದ ಉದ್ದೇಶಕ್ಕಾಗಿ, ಮತ್ತು ಆತನ ಜನರಿಗಾಗಿ, ಆರಿಸಲ್ಪಟ್ಟ ಬಾಧ್ಯಸ್ತರು ಆಗಿದ್ದರು. ಎರಡು ಸಾವಿರ ವರುಷಗಳ ಹಿಂದೆ ಈ ಪೇತ್ರನ ಪತ್ರಿಕೆಯು ಬರೆಯಲ್ಪಟ್ಟಿತು, ಆದರೆ ಅದರ ಸಂದೇಶ ಈಗಲೂ ಜನರನ್ನು ಎಚ್ಚರಪಡಿಸುತ್ತದೆ. ಮುಂದಿನ ವಾಗ್ದಾನದ ಪ್ರಭಾವದ ನೀಕ್ಷೆಯನ್ನು ನೆನಪುಮಾಡಿಕೊಳ್ಳುವಾಗ, ಈಗ ಕ್ರೈಸ್ತರಿಗೆ ಉಂಟಾಗುವ ವಿರೋಧತ್ವವು ಅಲ್ಪವಾದದ್ದೆ. ಅವನ ಪತ್ರಿಕೆಯಲ್ಲಿ ಪೇತ್ರನು ಇನ್ನೂ ಹೆಚ್ಚಾಗಿ ಹೇಳುವದಕ್ಕಿದ್ದನು, ಕ್ರಿಸ್ತನಲ್ಲಿ ಇದ್ದು ಕೊಂಡವರಾದರೆ, ಆ ಸಂತೋಷದ ಬೆಳಕನ್ನು ಅರ್ಥಮಾಡಿಕೊಳ್ಳುತ್ತೇವೆ.